**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 87/2020**

**ಚಾ.ಸಾಃ 24, ಪ್ರಾ.ಸಾಃ 11**

| | |
|---|---|
| ಸಾಕ್ಷಿದಾರನ ಹೆಸರು | ವಸಂತ ಆಚಾರ್ |
| ತಂದೆಯ ಹೆಸರು | ರಾಮಾ ಆಚಾರ್ |
| ವಯಸ್ಸು | 58 ವರ್ಷಗಳು |
| ಉದ್ಯೋಗ | ಪೋಲೀಸ್ ನಿರೀಕ್ಷಕರು, ಗೋಕರ್ಣ ಪೋಲೀಸ್ ಠಾಣೆ |
| ವಾಸ್ತವ್ಯ | ಗೋಕರ್ಣ |

**ಸಾಕ್ಷಿಯನ್ನು ದಿನಾಂಕಃ 11-07-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ದಿನಾಂಕ 25-09-2019 ರಿಂದ ದಿನಾಂಕ 03-10-2020 ರ ವರೆಗೆ ಹೊನ್ನಾವರ ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ.

ಈ ಪ್ರಕರಣದ ಕಡತವನ್ನು ದಿನಾಂಕಃ **25-09-2019** ರಂದು ಚಾಸಾ-23 ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ.

ದಿನಾಂಕ 31-07-2020 ರಂದು ಸಂಜೆ 05-00 ಗಂಟೆ ಸಮಯಕ್ಕೆ ನಾನು ಸಿಬ್ಬಂದಿಯೊಡನೆ ಕಡತೋಕಾ, ಜಡ್ಡಿಗದ್ದೆ ಕಡೆಗೆ ಗಸ್ತು ಕರ್ತವ್ಯ ಮಾಡುತ್ತಿದ್ದಾಗ ಚಂದಾವರ ಕಡೆಯಿಂದ ಮೋಟಾರು ಸೈಕಲ್ಲಿನಲ್ಲಿ ಇಬ್ಬರು ಬರುತ್ತಿದ್ದು ಅವರನ್ನು ತಡೆದು ವಿಚಾರಿಸಲಾಗಿ ಅವರು ಸರಿಯಾದ ಉತ್ತರ ನೀಡದೇ ಸಂಶಯಾಸ್ಪದವಾಗಿ ಕಂಡುಬಂದಿದ್ದರಿಂದ ಠಾಣೆಗೆ ಕರೆದುಕೊಂಡು ಬಂದು ಹೆಸರು, ವಿಳಾಸ ವಿಚಾರಿಸಿದಾಗ ಒಬ್ಬ ತನ್ನ ಹೆಸರನ್ನು ಸಜ್ಜದ್ ಅಹ್ಮದ್ ಕುತ್ಬುದ್ದಿನ್ ಗಣಿ ಮತ್ತೊಬ್ಬ ಮುಬಾಸಿರ್ ಕುತ್ಬುದ್ದಿನ್ ಗಣಿ ಅಂತ ತಿಳಿಸಿರುತ್ತಾರೆ. ಅವರನ್ನು ವಿಚಾರಣೆಗೆ ಒಳಪಡಿಸಿದಾಗ ಅವರು ಈ ಪ್ರಕರಣಗಳಲ್ಲಿ ಅಲ್ಲದೇ ಹೊನ್ನಾವರ ಠಾಣಾ ವ್ಯಾಪ್ತಿಯ ಹಲವು ಕಡೆ ಕಳುವು ಪ್ರಕರಣದಲ್ಲಿ ಭಾಗಿಯಾಗಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಈ ಬಗ್ಗೆ ಆರೋಪಿತರು ಇಬ್ಬರೂ ಸ್ವಖುಷಿ ಹೇಳಿಕೆಯನ್ನು ನೀಡಿರುತ್ತಾರೆ. ಅದರಂತೆ ಆರೋಪಿತರು ಕಳುವಿನ ಕಾಲಕ್ಕೆ ಕಾರು ಮತ್ತು ಬೈಕನ್ನು ಉಪಯೋಗಿಸುತ್ತಿದ್ದು ಕಾರನ್ನು ಮತ್ತು ಕಬ್ಬಿಣದ ರಾಡನ್ನು ಮನೆಯಲ್ಲಿ ಇಟ್ಟಿರುವುದಾಗಿ ಹೇಳಿಕೆ ನೀಡಿರುತ್ತಾರೆ. ಅದರಂತೆ ಪಂಚರನ್ನು ಠಾಣೆಗೆ ಬರಮಾಡಿಕೊಂಡು ಅವರಿಗೆ ಮಾಹಿತಿ ನೀಡಿ ಆರೋಪಿತರು ತಮ್ಮ ಮನೆಗೆ ನಮ್ಮನ್ನು ಕರೆದುಕೊಂಡು ಹೋಗಿ ಕಳುವಿನ ಕಾಲಕ್ಕೆ ಬಳಸಿದ ಒಂದು ಕಾರನ್ನು ಅವರ ಮನೆಯ ಹತ್ತಿರ ತೋರಿಸಿರುತ್ತಾರೆ. ಕಾರಿನ ಎಡಬದಿಯ ಡೋರನ್ನು ತೆಗೆದು ಪರಿಶೀಲಿಸಲಾಗಿ ಕಾರಿನ ಡ್ಯಾಶಬೋರ್ಡನಲ್ಲಿ ಕಬ್ಬಿಣದ ಎರಡು ರಾಡಗಳು ಇದ್ದು ಆರೋಪಿತರು ಅವುಗಳನ್ನು ತೆಗೆದು ತೋರಿಸಿದ ಸದರಿ ಕಬ್ಬಿಣದ ರಾಡಗಳಿಂದ ಮನೆ ಕಳ್ಳತನ ಮಾಡಿರುವುದಾಗಿ ತಿಳಿಸಿರುತ್ತಾರೆ.

ನಂತರ ಆರೋಪಿತರು ನಮ್ಮನ್ನು ಅವರ ಮನೆಯ ಒಳಗೆ ಕರೆದುಕೊಂಡು ಹೋಗಿ ಒಂದು ಕಪಾಟಿನಲ್ಲಿ ಇದ್ದಂತಹ ಒಂದು ಮೂಗುತಿಯನ್ನು ತೆಗೆದು ಹಾಜರುಪಡಿಸಿರುತ್ತಾರೆ. ನಂತರ ಕಾರು, ಕಬ್ಬಿಣದ ರಾಡಗಳು ಹಾಗೂ ಆರೋಪಿತರು ಹಾಜರುಪಡಿಸಿದ ಮೂಗುತಿಯನ್ನು ಪಂಚನಾಮೆಯಡಿಯಲ್ಲಿ ಜಪ್ತುಪಡಿಸಿಕೊಂಡು ಈ ಬಗ್ಗೆ ಫೋಟೋ ತೆಗೆದು ಠಾಣೆಗೆ ಬಂದು ಜಪ್ತು ಪಡಿಸಿಕೊಂಡ ವಸ್ತುಗಳನ್ನು ಠಾಣಾ ಸ್ವತ್ತುಪಟ್ಟಿಯಲ್ಲಿ ನಮೂದಿಸಿರುತ್ತೇನೆ. ಆರೋಪಿತರು ತಮ್ಮ ಹೇಳಿಕೆಯಲ್ಲಿ ಹಳದೀಪುರದಲ್ಲಿ ಹೊಸದಾಗಿ ಕಟ್ಟಿಸುತ್ತಿರುವ ಚಾಸಾ-1 ರವರ ಮನೆಯಲ್ಲಿ ಸುಮಾರು ರೂ.60,000-00 ನಗದು ಹಣವನ್ನು ಕಳುವು ಮಾಡಿರುವುದಾಗಿ ತಿಳಿಸಿರುತ್ತಾರೆ. ಆರೋಪಿ ಮುಂದಿನ ತನಿಖೆಗೆ ಅವಶ್ಯಕತೆ ಇರುವುದರಿಂದ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿ ಪೋಲೀಸ್ ಕಸ್ಟಡಿಗೆ ರಿಮಾಂಡ್ ಅರ್ಜಿಯನ್ನು ಸಲ್ಲಿಸಿರುತ್ತೇನೆ.

ದಿನಾಂಕ 04-08-2020 ರಂದು ಮಾನ್ಯ ನ್ಯಾಯಾಲಯದ ಆದೇಶದಂತೆ ಆರೋಪಿತರನ್ನು ಪೋಲೀಸ್ ಕಸ್ಟಡಿಗೆ ತೆಗೆದುಕೊಂಡಿರುತ್ತೇನೆ. ನಂತರ ಆರೋಪಿತರು ಕಳುವು ಸ್ಥಳವನ್ನು ತೋರಿಸುವುದಾಗಿ ಹೇಳಿದ್ದರಿಂದ 2 ಜನ ಪಂಚರನ್ನು ಬರಮಾಡಿಕೊಂಡು ಅವರಿಗೆ ವಿಚಾರ ತಿಳಿಸಿದ್ದು ಅವರು ಒಪ್ಪಿಕೊಂಡಿದ್ದು ಅದರಂತೆ ಆರೋಪಿತರನ್ನು ಚಾಸಾ-1 ರವರು ಹೊಸದಾಗಿ ಕಟ್ಟಿಸುತ್ತಿದ್ದ ಹಳದೀಪುರ-ಅಗ್ರಹಾರದ ಒಂದು ಮನೆಗೆ ಕರೆದುಕೊಂಡು ಹೋಗಿರುತ್ತೇನೆ. ಅಲ್ಲಿ ಆರೋಪಿತರು ಒಂದು ಮನೆಯನ್ನು ತೋರಿಸಿ ಮನೆಯ ಹಿಂಭಾಗದಿಂದ ತಾವು ಮನೆಯ ಒಳಗೆ ಹೋಗಿ ಕಳ್ಳತನ ಮಾಡಿರುವುದಾಗಿ ತೋರಿಸಿರುತ್ತಾರೆ. ಆರೋಪಿತರು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆ ತಯಾರಿಸಿ ಒಂದು ಫೋಟೋ ತೆಗೆದಿರುತ್ತೇನೆ.

ದಿನಾಂಕ 05-08-2020 ರಂದು ಚಾಸಾ-1 ರವರ ಮರುಹೇಳಿಕೆ ಪಡೆದಿರುತ್ತೇನೆ. ಚಾಸಾ-8 ರಿಂದ 10 ರವರ ಮರು ಹೇಳಿಕೆ ಪಡೆದಿರುತ್ತೇನೆ.

ದಿನಾಂಕ 02-10-2020 ರಂದು ಫೋಟೋ ತೆಗೆದ ಬಗ್ಗೆ ಚಾಸಾ-20 ರವರಿಂದ ಕಲಂ 65 ಬಿ ಪ್ರಮಾಣಪತ್ರ ಪಡೆದಿರುತ್ತೇನೆ. ಅದೇ ದಿನ ಚಾಸಾ-21 ರವರ ಹೇಳಿಕೆ ಪಡೆದಿರುತ್ತೇನೆ.

ನಂತರ ಕೇಸಿನ ಕಡತವನ್ನು ಚಾಸಾ-25 ರವರಿಗೆ ವಹಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಗುರುತಿಸಿರುತ್ತಾರೆ.

ಆರೋಪಿತರ ಮನೆಯಿಂದ ಅಮಾನತ್ತುಪಡಿಸಿಕೊಂಡು ಕಾರು ಮತ್ತು ಕಬ್ಬಿಣದ ಸರಳುಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರಿಂದಃ**

ನಾವು ಆರೋಪಿತರನ್ನು ಹಿಡಿಯುವ ಪೂರ್ವದಲ್ಲಿ 10 ರಿಂದ 12 ಕಳುವು ಪ್ರಕರಣಗಳು ದಾಖಲಾಗಿದ್ದವು ಎಂದರೆ ಸರಿ. ಸದರಿ 10 ಕಳುವು ಪ್ರಕರಣಗಳಲ್ಲಿ ಏನೆಲ್ಲ ತನಿಖೆ ಮಾಡಿದ್ದೇವೆ ಎಂಬುದರ ಬಗ್ಗೆ ಸದರಿ ಪ್ರಕರಣದ ಸಿಡಿಗಳಲ್ಲಿ ನಮೂದು ಇದೆ. ಆರೋಪಿತರನ್ನು ಹಿಡಿದ ದಿನ ನಾವು ಠಾಣಾ ವ್ಯಾಪ್ತಿಯ ಎಲ್ಲಾ ಪ್ರದೇಶಗಳಲ್ಲೂ ಗಸ್ತು ಮಾಡಿಕೊಂಡು ಬರುತ್ತಿದ್ದೆವು. ಆರೋಪಿತರನ್ನು ಹಿಡಿಯುವ ಪೂರ್ವದಲ್ಲಿ ಸುಮಾರು 4-5 ವಾಹನಗಳನ್ನು ಹಿಡಿದು ವಿಚಾರಿಸಿ ಬಿಟ್ಟಿದ್ದೆವು. ಅವರುಗಳ ಹೆಸರು

ವಿಳಾಸವನ್ನು ನೋಟ್ ಮಾಡಿಕೊಂಡಿಲ್ಲ. ಆರೋಪಿತರು 4916 ನ ಪಲ್ಸರ್ ಬೈಕಿನಲ್ಲಿ ಬರುತ್ತಿದ್ದರು. ಅದೇ ದಿನ ಸದರಿ ಬೈಕು ಯಾರಿಗೆ ಸಂಬಂದಪಟ್ಟಿದ್ದು ಎಂದು ವಿಚಾರಿಸಿಲ್ಲ. ಅದರ ನಂತರ ವಿಚಾರಿಸಿರುತ್ತೇನೆ. ಸದರಿ ಬೈಕು ಯಾರ ಹೆಸರಿನಲ್ಲಿದೆ ಎಂದು ದಾಖಲೆ ನೋಡಿದ್ದೇನೆ ಈಗ ನೆನಪಿಲ್ಲ. ಆ ದಿನ ಆರೋಪಿತರನ್ನು ಠಾಣೆಗೆ ಕರೆತಂದು ಸುವಾರು ಒಂದರಿಂದ ಒಂದುವರೆ ಗಂಟೆಗಳ ಕಾಲ ವಿಚಾರಣೆ ಮಾಡಿರುತ್ತೇನೆ. ಆರೋಪಿತರು ತಮ್ಮ ಸ್ವ ಖುಷಿ ಹೇಳಿಕೆಯಲ್ಲಿ ಯಾವ ಯಾವ ಊರುಗಳಲ್ಲಿ ಕಳುವು ಮಾಡಿದ್ದೇವೆ ಎಂಬುದನ್ನು ಹೇಳಿದ್ದಾರೆ. ಕಬ್ಬಿಣದ ರಾಡುಗಳನ್ನು ಅಮಾನತ್ತುಪಡಿಸಿಕೊಂಡ ನಂತರ ಅವುಗಳ ಮೇಲೆ ಪಂಚ ಸಹಿಯುಳ್ಳ ಚೀಟಿಯನ್ನು ಹಚ್ಚಿದ್ದೆವು. ಈಗ ಅವು ಬಿದ್ದು ಹೋಗಿರಬಹುದು. ಗುಜರಿ ಅಂಗಡಿಯಲ್ಲಿ ಕಬ್ಬಿಣದ ರಾಡುಗಳು ಬಹಳಷ್ಟು ಸಿಗುತ್ತವೆ ಎಂದರೆ ಸರಿ. ನಾನು ಸಾಕ್ಷಿದಾರರ ಯಾವುದೇ ಮರುಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಯಾವುದೇ ಕೇಸಿನಲ್ಲಿ ಯಾವುದೇ ಫೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ಉದ್ದೇಶ ಪೂರ್ವಕವಾಗಿ ಎಲ್ಲಾ ಕೇಸುಗಳಲ್ಲಿ ಆರೋಪಿತರನ್ನು ಸೇರಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**